
‘‘ನೀರು ಬಿಸಿಯಾಗಿದೆ. ಆರುವ ಮುನ್ನ ಸ್ನಾನ ಮುಗಿಸಿಬಿಡಿ’’ ಎಂದ ಗೈಡ್. ನಾವು ಒಬ್ಬೊಬ್ಬರಾಗಿ ಸ್ನಾನ ಮುಗಿಸಿ ಬಂದು ನೋಡಿದಾಗ, ವಾತಾವರಣ ಇನ್ನಷ್ಟು ಮಬ್ಬಾಗಿತ್ತು. ಮೋಡ ದಟ್ಟೈಸಿ, ಎಲ್ಲೆಡೆ ನೆರಳು ಆವರಿಸಿತ್ತು; ದೂರದ ಬೆಟ್ಟ-ಗುಡ್ಡಗಳಲ್ಲಿ ಅಲ್ಲಲ್ಲಿ ಬಿಸಿಲು ಕಾಣಿಸುತ್ತಿತ್ತು. ಸಣ್ಣಗೆ ಸುರಿಯುತ್ತಿದ್ದ ತುಂತುರು ಮಳೆ ನಿಧಾನವಾಗಿ ಜೋರಾದಂತೆ ಕಾಣಿಸಿತು. ಪ್ಲಾಸ್ಟಿಕ್‌ನ ರೈನ್ ಕೋಟ್ ಹಾಕಿಕೊಂಡು ನಾವು ರುದ್ರನಾಥನ ದರ್ಶನ ಮಾಡಲು ಹೊರಟೆವು. ನಾವು ರಸ್ತೆಯಲ್ಲಿ ಸಾಗುತ್ತಿದ್ದರೆ, ಅಲ್ಲಲ್ಲಿ ಕೆಲವು ಮನೆಗಳು, ಚಹಾ ಹೋಟೆಲುಗಳು ಕಾಣಿಸಿದವು. ಎಂಟು-ಹತ್ತು ಮನೆಗಳಷ್ಟೇ ಅಲ್ಲಿದ್ದಿರಬೇಕು. ಅವರೆಲ್ಲ ಚಳಿಗಾಲದಲ್ಲಿ ತಗ್ಗಿನ ಪ್ರದೇಶಗಳಿಗೆ ಹೋಗುವವರೆ. ಯಾತ್ರಿಕರು ಬರುವ ಸಮಯದಲ್ಲಿ ಅಲ್ಲಿರುತ್ತಾರೆ. ಯಾತ್ರಿಕರ ಹಣದಿಂದ, ಇನ್ನು ಕೆಲವು (ಕೃಷಿಯೇ ಮೊದಲಾದ) ಮೂಲಗಳಿಂದ ಅವರ ಜೀವನ ನಡೆಯಬೇಕು.

ಸುತ್ತಮುತ್ತ ಪರ್ವತಗಳ ದೃಶ್ಯ ಅಲ್ಲಿ ಅತ್ಯಂತ ಸುಂದರವಾಗಿತ್ತು. ದೂರದಲ್ಲಿ ಹಿಮಾಚ್ಛಾದಿತ ಪರ್ವತಗಳು, ನಡುನಡುವೆ ಬೋಳು ಬುಗ್ಯಾಲ್‌ಗಳು, ನಡುವೆ ದಟ್ಟ ಅರಣ್ಯಪ್ರದೇಶ, ಸಂಪೂರ್ಣ ನಿರ್ಜನವಾದ ಕಣಿವೆಗಳು – ಒಟ್ಟಿನಲ್ಲಿ ಅದೊಂದು ಮಾಯಾಲೋಕವೇ ಅನ್ನಿಸಿತು. ಪಿತೃದೇವತೆಗಳ ಆವಾಸಸ್ಥಾನವೆಂಬ ಪೌರಾಣಿಕ ಕಥೆಯ ಹಿನ್ನೆಲೆಯೂ ಸೇರಿಕೊಂಡು, ರುದ್ರನಾಥ, ನಿಜಕ್ಕೂ ರುದ್ರರಮಣೀಯವೆನಿಸುತ್ತಿತ್ತು. ಭಗವಾನ್ ರುದ್ರನ ನಿವಾಸವಾಗಲು ಇದಕ್ಕಿಂತ ಲಾಯಕ್ಕಾದ ಸ್ಥಳ ಇನ್ನೆಲ್ಲಿ?

ನಾವು ಕ್ಷಿಪ್ರವಾಗಿ ರುದ್ರನಾಥನ ಗುಹೆಯೊಳಕ್ಕೆ ಹೋಗಿ, ರುದ್ರನಾಥನ ದರ್ಶನ ಮಾಡಿದೆವು. ರುದ್ರನಾಥನ ಮುಖ ತುಸು ಬಾಗಿದಂತಿದ್ದು, ಕಲ್ಲಿನ ಲಿಂಗದಲ್ಲೇ ಮುಖದ ಆಕೃತಿ ಕಾಣುತ್ತದೆ. ಬಿಳಿ ಬಣ್ಣದಲ್ಲಿ ರುದ್ರನ ಮೀಸೆಯನ್ನು ಚಿತ್ರಿಸಿದ್ದಾರೆ.‘‘ರುದ್ರನಾಥನ ಮುಖ ನೋಡಿ, ಎಷ್ಟೊಂದು ಸುಂದರವಾಗಿದೆ’’ ಎಂದ ಗೈಡ್. ನಾವು ತಲೆಬಾಗಿ ನಮಸ್ಕರಿಸಿದೆವು. ಪಂಚಕೇದಾರದ ಕಥೆಯ ಪ್ರಕಾರ ರುದ್ರನಾಥದಲ್ಲಿ ಶಿವನ ಮುಖ ಬಿದ್ದಿತಂತೆ. ಇಲ್ಲಿ ಶಿವನ ಮುಖದಲ್ಲಿ ಮೂಡುವ ಭಾವ ಮಾತ್ರ ವಿಚಿತ್ರ, ಅದ್ಭುತ ಹಾಗೂ ವಿಸ್ಮಯಕಾರಿಯೆನಿಸಿತು. ‘ಅಷ್ಟೊಂದು ದೂರದಿಂದ ನನ್ನ ದರ್ಶನ ಮಾಡಲು ಬಂದಿದ್ದೀರಲ್ಲಾ’ ಎಂಬ ಕರುಣಾಭಾವವೋ; ‘ಪ್ರಪಂಚದ ಜಂಜಾಟದಲ್ಲಿ ಸಿಕ್ಕಿ ಒದ್ದಾಡುವ ನಿಮ್ಮನ್ನು ನೋಡಿ ನನಗೆ ನಗೆ ಬರುತ್ತಿದೆ’ ಎಂಬ ವಿಡಂಬನೆಯ ನಗೆಯೋ; ‘ಎಲ್ಲ ಬಿಟ್ಟು ಇಷ್ಟು ಕಷ್ಟಕರವಾದ ಯಾತ್ರೆ ಮಾಡಿ ಬಂದಿದ್ದೀರಲ್ಲ , ನಿಜಕ್ಕೂ ನೀವು ಧೀರರು’ ಎಂಬ ಮೆಚ್ಚುಗೆಯೋ; ಅಥವಾ ‘ಅಂತೂ ಕೊನೆಗೆ ನನ್ನ ದರ್ಶನ ಮಾಡಿದ್ದೀರ. ನಿಮಗೆ ಮಂಗಳವಾಗಲಿ’ ಎಂಬ ಆಶೀರ್ವಾದ ಭಾವನೆಯೋ, ಖಚಿತವಾಗಿ ಹೇಳಲಾಗದು, ಹಾಗಿತ್ತು. ನಮ್ಮ ಮಾನಸಿಕ ಸ್ಥಿತಿಗತಿಯ ಮೇಲೆ ಅವಲಂಬಿತವಾಗಿ, ಶಿವನ ವಿಗ್ರಹದ ವಿಚಿತ್ರ ಆಕಾರವನ್ನು ನೋಡಿದಾಗ ಏಳುವ ಭಾವನೆಗಳು ಎಷ್ಟೆಷ್ಟು ಬಗೆಯದೋ, ಹೇಳುವುದೆಂತು? ಒಂದಂತೂ ನಿಜ,





ರುದ್ರನಾಥನ ವಿಗ್ರಹ

ಅಲ್ಲಿನ ಮೂರ್ತಿಯಲ್ಲಿ ಶಿವನ ಜೀವಂತ ಭಾವ ನಿಚ್ಚಳವಾಗಿದೆ; ವಿಶೇಷ ಶಕ್ತಿಯಿದೆ. ದರ್ಶನ ಮಾಡಿ ಮರಳಿ ನಾವಿದ್ದ ಹೋಟೆಲಿಗೆ ಬಂದು ಮತ್ತೆ ಮಲಗಿಕೊಂಡೆವು. ಮಳೆಗೆ ಅರ್ಧಂಬರ್ಧ ಒದ್ದೆಯಾಗಿ, ಗಡಗಡ ನಡುಗುತ್ತ ಬಂದು, ಮೈ ಒರೆಸಿಕೊಂಡು ಅರೆ ಹಾಸಿಗೆ (ಕ್ವಿಲ್ಟ್) ಹೊದ್ದು ಮಲಗಿದರೆ, ಗಾಢವಾದ ನಿದ್ರೆ ಹತ್ತಿಬಿಟ್ಟಿತು. ಅಂದು ಇಡೀದಿನ ನಾವು ನಿದ್ರಿಸಿದೆವು; ಮಧ್ಯಾಹ್ನ ಊಟ ಮಾಡಲು ಗೈಡ್ ಎಬ್ಬಿಸಿದಾಗ ಮಾತ್ರ ಎದ್ದು ಹೋಗಿ, ನಿದ್ದೆ ಗಣ್ಣಿನಲ್ಲೇ ಊಟ ಮಾಡಿದೆವು. ಮಳೆ ನಿರಂತರ ಸುರಿಯುತ್ತಿದ್ದುದರಿಂದ ಏನನ್ನೂ ನೋಡಲಾಗಲಿಲ್ಲ; ಆಯಾಸ, ಮೈಕೊರೆವ ಚಳಿ ಇವು ಎರಡೂ ಸೇರಿಕೊಂಡಿದ್ದರಿಂದ ನಿದ್ರೆಯೊಂದೇ ನಮಗೆ ಶರಣು.

ಸಾಯಂಕಾಲ ವಿಕ್ರಂ ಸಿಂಹ ಎಬ್ಬಿಸಿದ. ‘‘ಮಹಾರಾಜ್, ಶೃಂಗಾರ ಆರತಿ ನೋಡಿ ಬರೋಣ. ಸಮಯವಾಯಿತು..’’ ನಾವು ಬೇಗನೆ ಎದ್ದು ಮುಖತೊಳೆದು ರೆಡಿಯಾದೆವು. ಆಗ ಮಳೆ ನಿಂತಿತ್ತು. ಸಮಯ ಸಾಯಂಕಾಲ ಸುಮಾರು ೬.೪೫ ಆಗಿದ್ದಿರಬೇಕು. ಆಗ ದೇವಸ್ಥಾನದಲ್ಲಿ ಸುಮಾರು ಇಪ್ಪತ್ತು-ಮೂವತ್ತು ಮಂದಿ ಸೇರಿದ್ದರು. ಇನ್ನೂ ಆರತಿ ಆರಂಭವಾಗಿರಲಿಲ್ಲ. ನಮ್ಮನ್ನು ನೋಡಿದ ಭಕ್ತರುಗಳೆಲ್ಲ ನಮಗೆ ದಾರಿ ಮಾಡಿಕೊಟ್ಟರು. ನಾವು ದೇವರ ಮೂರ್ತಿಗೆ ಸಮೀಪದಲ್ಲಿ ನಿಂತೆವು. ಶೃಂಗಾರ ಆರತಿ ಆರಂಭವಾಯಿತು. ಆರತಿ, ಚಾಮರವೇ ಮೊದಲಾದ ಸೇವೆಗಳು; ಭಕ್ತರಿಂದ ಆರತಿ, ಗಾಯನ ಇವೆಲ್ಲ ನಡೆದು, ಕೊನೆಗ ಪ್ರಸಾದ ಸ್ವೀಕಾರ ಮಾಡಿ, ಮತ್ತೆ ಹೋಟೆಲಿಗೆ ಮರಳಿ ಊಟ ಮುಗಿಸಿದೆವು. ಶೌಚಾದಿ ಮುಗಿಸಿ, ಮರುದಿನ ಬೆಳಿಗ್ಗೆ ಹೊರಡುವ ಬಗ್ಗೆ ಮಾತನಾಡಿಕೊಂಡೆವು. ‘‘ಬೆಳಿಗ್ಗೆ ಐದೂವರೆಗೆ ಸರಿಯಾಗಿ ಹೊರಡಲೇಬೇಕು. ಏನೇ ಆಗಲಿ, ನಾಳೆಯೇ ಸಗರ್ ತಲುಪಬೇಕು’’ ಎಂದೆವು. ‘‘ನಾಳೆ ಬೆಳಗ್ಗೆಯೇ ಹೊರಡೋಣ. ಅನಸೂಯಾ ದೇವಿಯ ಮಂದಿರವಿದೆ, ಮಂಡಲ್‌ಗೆ ಹತ್ತಿರ. ಬೇಕಿದ್ದರೆ ಅಲ್ಲಿ ತಂಗಿದರೂ ತಂಗಬಹುದು. ಸಾಯಂಕಾಲವಂತೂ ತಲುಪಬಹುದು’’ ಎಂದ ನಮ್ಮ ಗೈಡ್. ‘‘ತಂಗುವ ಪ್ರಶ್ನೆಯೇ ಇಲ್ಲ. ನಾಳೆ ಏನೇ ಆದರೂ ಮರಳಿ ಹೋಗಲೇಬೇಕು’’ ಎಂದರು ಕರುಣಾಕರಾನಂದಜಿ. ಮತ್ತೆ ನಿದ್ರಾಲೋಕಕ್ಕೆ ಮರಳಿದವರಿಗೆ ಎಚ್ಚರವಾದದ್ದು ಬೆಳಿಗ್ಗೆ ಐದು ಗಂಟೆಗೇ.

*(ಮುಂದುವರಿಯುವುದು)*




ಸ್ವಾಮಿ ನಿತ್ಯಸ್ಥಾನಂದ

# ವರ್ಣವ್ಯವಸ್ಥೆ

ಮುಂದಿನ ಕೆಲವು ಶ್ಲೋಕಗಳಲ್ಲಿ ವರ್ಣವ್ಯವಸ್ಥೆಯನ್ನು ಕುರಿತು ಶ್ರೀಕೃಷ್ಣನು ಹೇಳುತ್ತಾನೆ. ಇದು ತುಂಬ ಜಟಿಲವಾದ ವಿಷಯ, ಇದರ ಬಗ್ಗೆ ಏನು ಹೇಳಿದರೂ ಜನರಲ್ಲಿ ಭಾವೋದ್ವೇಗವನ್ನು ಕೆರಳಿಸುತ್ತದೆ. ಇದರ ಪರವಾಗಿ ಹೇಳಿದರೆ ಒಂದು ವರ್ಗದವರು ಕೆರಳುತ್ತಾರೆ, ವಿರುದ್ಧವಾಗಿ ಹೇಳಿದರೆ ಇನ್ನೊಂದು ವರ್ಗದವರು ಕೆರಳುತ್ತಾರೆ. ಈ ವರ್ಣವ್ಯವಸ್ಥೆಯು ಈಗ ಜಾತಿಪದ್ಧತಿಯಾಗಿ (Caste System) ಪರಿಣಮಿಸಿದೆ. ವಿದೇಶೀಯರಿಂದಲೂ ಸ್ವದೇಶೀಯರಿಂದಲೂ ಇದರಷ್ಟು ಖಂಡನೆಗೆ ಒಳಗಾದ ವಿಷಯ ಬೇರೊಂದಿಲ್ಲ ಎನ್ನಬಹುದೇನೊ. ಹಿಂದೂಧರ್ಮಕ್ಕೂ ಮತ್ತು ಭಾರತೀಯ ಸಂಸ್ಕೃತಿಗೂ ತುಂಬ ಅವಹೇಳನವನ್ನು ತಂದಿರುವ ವಿಷಯ ಇದೆಂದು ಹೇಳಲೇಬೇಕಾಗುತ್ತದೆ. ಈ ಅವಹೇಳನವು ನ್ಯಾಯಯುಕ್ತವೊ ಅಲ್ಲವೊ ಎಂಬುದು ಬೇರೆ ವಿಷಯ. ಅತ್ಯುದಾತ್ತವೂ ಸಾರ್ವತ್ರಿಕವೂ ಆದ ಚಿಂತನೆಗಳಿಂದೊಡಗೂಡಿರುವ, ಇಡೀ ಜಗತ್ತಿನ ಏಕತೆಯನ್ನು ಸಾರುವ ಹಿಂದೂಧರ್ಮಕ್ಕೆ ಅಂಟಿಕೊಂಡಿರುವ ಈ ಜಾತಿಪದ್ಧತಿ ಎಂಬ ಕಪ್ಪುಚುಕ್ಕೆ ಅದರ ಸೌಂದರ್ಯವನ್ನು ಕೆಡಿಸುತ್ತಿದೆ. ಇದೊಂದು ಸಾಮಾಜಿಕ ವ್ಯವಸ್ಥೆಯಾದರೂ, ಹಿಂದೂ ಸಮಾಜದಲ್ಲಿ ಪ್ರತಿಯೊಂದು ಕ್ಷೇತ್ರವೂ ಧರ್ಮದೊಡನೆ ಲಗತ್ತಿಸಿಕೊಂಡಿರುವುದರಿಂದ, ಈ ಜಾತಿ ಪದ್ಧತಿಯೂ ಧರ್ಮಕ್ಕೆ ಸಂಬಂಧಪಟ್ಟುದಾಗಿದೆ.

ವೇದಕಾಲದ ಆದಿಭಾಗದಲ್ಲಿ ಈ ರೀತಿಯ ವರ್ಣವಿಭಾಗ ಇರಲಿಲ್ಲವೆಂದು ಕಂಡುಬರುತ್ತದೆ. ಕಾಲಕ್ರಮದಲ್ಲಿ ಸಮಾಜವು ಬೆಳೆದಂತೆ, ವಿಸ್ತಾರಗೊಂಡಂತೆ ಈ ವರ್ಣವ್ಯವಸ್ಥೆಯು ಜಾರಿಗೆ ಬಂದಿರಬೇಕು. ಮಹಾಭಾರತದ ಒಂದು ಶ್ಲೋಕವು ಇದಕ್ಕೆ ಪೂರಕವಾಗಿದೆ:

**ಏಕವರ್ಣಮಿದಂ ಪೂರ್ಣಂ ವಿಶ್ವಮಾಸೀದ್ ಯುಧಿಷ್ಠಿರ ।**
**ಕರ್ಮಕ್ರಿಯಾವಿಶೇಷೇಣ ಚಾತುರ್ವರ್ಣ್ಯಂ ಪ್ರತಿಷ್ಠಿತಮ್ ॥**

''ಈ ವಿಶ್ವವು ಮೊದಲು ಒಂದೇ ವರ್ಣದಿಂದ ಕೂಡಿತ್ತು. ವಿವಿಧ ಬಗೆಯ ಕರ್ಮಗಳಿಗೆ ಅನುಗುಣವಾಗಿ ನಾಲ್ಕು ವರ್ಣಗಳು ಅಸ್ತಿತ್ವಕ್ಕೆ ಬಂದವು.'' ಅಂದರೆ ವಿವಿಧ ವರ್ಗದವರು ಕೈಗೊಳ್ಳುವ ವಿವಿಧ ಕೆಲಸಗಳಿಗೆ ಅನುಗುಣವಾಗಿ ವರ್ಣವಿಭಾಗವಾಗಿದೆ – ಇದೊಂದು ವೃತ್ತಿ ವಿಭಾಗ (division labour). ಶ್ರೀಕೃಷ್ಣನೂ ಹದಿನೆಂಟನೆ ಅಧ್ಯಾಯದ ೪೧ನೇ ಶ್ಲೋಕದಲ್ಲಿ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ: ''ನಾಲ್ಕು ವರ್ಣದವರ ಕರ್ಮಗಳು ಅವರವರ ಸ್ವಭಾವ ಸಹಜ ಗುಣಗಳಿಗೆ ಅನುಗುಣವಾಗಿ ವಿಭಾಗಿಸಲ್ಪಟ್ಟಿವೆ. ನಾಲ್ಕನೆಯ ಅಧ್ಯಾಯದಲ್ಲಿಯೂ ಇದೇ ಅಭಿಪ್ರಾಯವು ವ್ಯಕ್ತವಾಗಿದೆ. ('**ಗುಣ ಕರ್ಮವಿಭಾಗಶಃ**')

ವೇದಭಾಗವಾದ ಪುರುಷಸೂಕ್ತದ ಒಂದು ಮಂತ್ರದಲ್ಲಿ ಈ ನಾಲ್ಕು ವರ್ಣದವರನ್ನು ವಿರಾಟ್‌ಪುರುಷನ ನಾಲ್ಕು ಅಂಗಗಳಿಗೆ ಸಂಬಂಧಿಸಲಾಗಿದೆ. ಬ್ರಾಹ್ಮಣನನ್ನು ಮುಖದೊಡನೆ ಸಂಬಂಧಿಸಿರುವುದಕ್ಕೆ ಕಾರಣ, ಮುಖದಲ್ಲೇ ಎಲ್ಲ ಇಂದ್ರಿಯಗಳೂ ಮಿದುಳೂ ಇರುವುದರಿಂದ ಅದು ಜ್ಞಾನವನ್ನು ಪ್ರತಿನಿಧಿಸುತ್ತದೆ; ಮತ್ತು ಬ್ರಾಹ್ಮಣರ ವೃತ್ತಿ ಜ್ಞಾನಾರ್ಜನೆ, ಅದರ ವಿತರಣೆ ಮುಂತಾದವು. ಇದನ್ನು ಆಧುನಿಕ ಭಾಷೆಯಲ್ಲಿ Intellectual Capital ಎಂದು ಕರೆಯಬಹುದು. ಕ್ಷತ್ರಿಯನನ್ನು ಬಾಹುಗಳಿಗೆ ಸಂಬಂಧಿಸಿರುವುದಕ್ಕೆ ಕಾರಣ, ಅವನ ವೃತ್ತಿ ಸಮಾಜವನ್ನು ಅಥವಾ ದೇಶವನ್ನು ಆಳುವುದು, ರಕ್ಷಿಸುವುದು ಮತ್ತು ಸಮಾಜದ ವ್ಯವಸ್ಥೆಯನ್ನು ಕಾಪಾಡುವುದು. ಇದನ್ನು Political Capital ಎಂದು ಕರೆಯುತ್ತಾರೆ. ವೈಶ್ಯನನ್ನು ತೊಡೆಗೆ ಸಂಬಂಧಿಸಿರುವುದಕ್ಕೆ ಕಾರಣ, ಅವನು ಚೆನ್ನಾಗಿ ಕೆಲಸಮಾಡಿ, ದುಡಿದು, ಹಣಸಂಪಾದಿಸಬೇಕು, ವಸ್ತುಗಳ ಸಾಗಾಣಿಕೆ ಅವನಿಂದ ನಡೆಯಬೇಕು. ವ್ಯಾಪಾರಿಗಳು ಸಾಮಾನ್ಯವಾಗಿ ದೇಶವಿದೇಶ ಸುತ್ತುತ್ತಿರುತ್ತಾರೆ. ಇದನ್ನು Financial Capital ಎಂದು ಕರೆಯಲಾಗಿದೆ. ಶೂದ್ರರ ಕೆಲಸ ಸೇವಾಕಾರ್ಯವಾದುದರಿಂದ ಅವರನ್ನು ಪಾದಕ್ಕೆ ಹೊಂದಿಸಲಾಗಿದೆ. ಆಧುನಿಕ ಭಾಷೆಯಲ್ಲಿ ಇದನ್ನು skilled labour ಎಂದು ಕರೆಯಲಾಗಿದೆ (ನೋಡಿ: *The Battle for Sanskrit* by Rajiv Malhotra). ಇದೊಂದು ವೃತ್ತಿವಿಭಾಗವೆಂಬುದು ಇದರಿಂದ ತಿಳಿದುಬರುತ್ತದೆ. ಇಂತಹ ವರ್ಣವ್ಯವಸ್ಥೆಯಲ್ಲಿ ಹಕ್ಕು ಬಾಧ್ಯತೆಗಳ ಪ್ರಶ್ನೆಯಾಗಲಿ, ಮೇಲು-ಕೀಳು ಭಾವವಾಗಲಿ ಇರಬೇಕಾದ ಆವಶ್ಯಕತೆ ಇಲ್ಲ. ಸಮಾಜದ ಸುವ್ಯವಸ್ಥೆಗೆ ಇವರೆಲ್ಲರೂ ತಮ್ಮ ತಮ್ಮ ವೃತ್ತಿಯಲ್ಲಿ ನಿರತರಾಗಿರುವುದು ಅತ್ಯಾವಶಕ. **ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ** – ''ತನ್ನ ತನ್ನ ಕರ್ಮದಲ್ಲಿ ತೊಡಗಿರುವ ಮಾನವನು ಅದರಿಂದಲೇ ಸಿದ್ಧಿಯನ್ನು ಪಡೆಯುತ್ತಾನೆ'' ಎಂದು ಶ್ರೀಕೃಷ್ಣನು ಹೇಳುತ್ತಾನೆ.

ಒಂದು ಸಂಗೀತ ಕಛೇರಿಯಲ್ಲಿ ಹಾಡುವವನು ಇರುತ್ತಾನೆ, ತಂತೀವಾದ್ಯಗಳನ್ನು ಬಾರಿಸುವವರಿರುತ್ತಾರೆ, ಮೃದಂಗಾದಿಗಳನ್ನು ನುಡಿಸುವವರಿರುತ್ತಾರೆ, ಮತ್ತು ತಾಳಹಾಕುವವನು ಇರುತ್ತಾನೆ. ಇವರೆಲ್ಲರೂ ತಮ್ಮ ತಮ್ಮ ಕೆಲಸವನ್ನು ಸರಿಯಾಗಿ ನಿಷ್ಠೆಯಿಂದ ನೆರವೇರಿಸುವುದರ ಮೂಲಕ ಸಂಗೀತವು ಅತ್ಯಂತ ಸುಶ್ರಾವ್ಯವಾಗುತ್ತದೆ. ಇಲ್ಲಿ ಸಂಗೀತ ಹಾಡುವವನು ತುಂಬಾ ಪ್ರಧಾನವಾಗಿ ಕಂಡುಬಂದರೂ, ತಾಳ ಹಾಕುವವನೂ ಅಷ್ಟೇ ಪ್ರಧಾನ. ಅವನು ತನ್ನ ಕೆಲಸ ನಿಕೃಷ್ಟವಾದುದೆಂದು ಅದನ್ನು ಕಡೆಗಣಿಸಿದರೆ ನಡೆಯುವುದಿಲ್ಲ. ಅವನು ಯಾವಾಗಲೂ ತಾಳಹಾಕಿಕೊಂಡೇ ಇರಬೇಕೆಂದೂ ಇಲ್ಲ, ಅವನೂ ಸಂಗೀತವನ್ನು ಕಲಿತು ದೊಡ್ಡ ಹಾಡುಗಾರನೇ ಆಗಬಹುದು. ಅದಕ್ಕೆ ಅವಕಾಶವೂ ಇದೆ. ತಾಳಹಾಕುವುದು ವಂಶಪಾರಂಪರ್ಯವಾಗಿ ಮುಂದುವರಿಯಬೇಕಾಗಿಯೂ ಇಲ್ಲ ; ಅವನ ಮಗ ಅಥವಾ ಮಗಳು ದೊಡ್ಡ ಸಂಗೀತಗಾರರಾಗಬಹುದು.

ಅಷ್ಟೇ ಅಲ್ಲದೆ, ಇಲ್ಲಿ ಯಾವುದೇ ತಾರತಮ್ಯವಿಲ್ಲ , ವಿಶೇಷ ಹಕ್ಕು ಬಾಧ್ಯತೆಗಳ ಪ್ರಶ್ನೆಯಿಲ್ಲ.

ಹಾಗೆಯೇ ಈ ಜಾತಿಪದ್ಧತಿಯೂ ಕೂಡ. ಬೇರೆ ಬೇರೆ ಜಾತಿಯವರ ವೃತ್ತಿಗಳು ವಂಶಪಾರಂಪರ್ಯವಾಗಿ ಮುಂದುವರಿಯಬೇಕೆಂಬ ನಿಯಮವೇನೂ ಇಲ್ಲ. ವಿವಿಧ ವೃತ್ತಿಗಳು ವಂಶಪಾರಂಪರ್ಯವಾಗಿ ಮುಂದುವರೆಯುವುದು ಸ್ವಾಭಾವಿಕವೇ ಹೊರತು ನಿಯಮವೇನೂ ಅಲ್ಲ. ಬ್ರಾಹ್ಮಣಪುತ್ರನು ಬ್ರಾಹ್ಮಣವೃತ್ತಿಯನ್ನು ಮುಂದುವರಿಸಿಕೊಂಡು ಹೋಗುವುದು, ವ್ಯಾಪಾರಿಯ ಮಗ ವ್ಯಾಪಾರಿಯೇ ಆಗುವುದು, ವೈಶ್ಯನ ಮಗ ವೈಶ್ಯನಾಗುವುದು ಇತ್ಯಾದಿಗಳು ಸ್ವಾಭಾವಿಕ. ಆದರೆ ಹಾಗೆಯೇ ಆಗಬೇಕೆಂಬ ನಿಯಮವೇನೂ ಇಲ್ಲ ಮತ್ತು ಆ ರೀತಿಯ ನಿಯಮವೂ ಇರಕೂಡದು. ಹುಟ್ಟಿನಿಂದ ಜಾತಿ ನಿರ್ಧಾರವಾಗುವ ರೂಢಿ ಬಂದಿರುವುದು, ಅದೇ ಒಂದು ಕಠಿನ ಪದ್ಧತಿಯಾಗಿರುವುದು ಹಿಂದೂ ಸಮಾಜದ ಒಂದು ದೊಡ್ಡ ದುರಂತ. ಪ್ರಾರಂಭದಲ್ಲಿ ಇದು ಹೀಗಿರಲಿಲ್ಲವೆಂಬುದಕ್ಕೆ ಅನೇಕ ಶಾಸ್ತ್ರದ ಮತ್ತು ಐತಿಹಾಸಿಕ ಪುರಾವೆಗಳಿವೆ. ವೇದಕಾಲದ ಪೂರ್ವಭಾಗದಲ್ಲಿ ನಮಗೆ ಮುಂದೆ ಕಂಡುಬರುವ ಜಾತಿಪದ್ಧತಿಯು ಜಾರಿಯಲ್ಲಿ ಇರಲಿಲ್ಲವೆಂದು ಅನೇಕ ವಿದೇಶ ಪ್ರಾಚ್ಯತಜ್ಞರೂ (orientalist) ಅಭಿಪ್ರಾಯಪಡುತ್ತಾರೆ. (ನೋಡಿ: *Story of Hindhu Culture* By Bahadur Mal). ಸತ್ಯಕಾಮ ಜಾಬಾಲನ ಕಥೆ ತುಂಬ ಪ್ರಸಿದ್ಧವಾದುದು. ಹಿಂದೆ ಶೂದ್ರರಿಗೂ ಯಜ್ಞದಲ್ಲಿ ಅಧಿಕಾರವಿತ್ತು. ಅನೇಕ ಶೂದ್ರ ಋಷಿಗಳ ಹೆಸರು ಶಾಸ್ತ್ರಗಳಲ್ಲಿ ಬರುತ್ತದೆ. ಅಷ್ಟೇಕೆ, ನಮಗೆಲ್ಲರಿಗೂ ಗುರು ಸ್ಥಾನದಲ್ಲಿರುವ ಪ್ರಸಿದ್ಧ ಋಷಿಗಳಾದ ವ್ಯಾಸ, ವಾಲ್ಮೀಕಿಗಳು ಶೂದ್ರವಂಶಕ್ಕೆ ಸೇರಿದವರು! (ನೋಡಿ: *Ishavasya Upanishad,* by Swami Thyagishananda). ವಾಲ್ಮೀಕಿಯು ನಿಜವಾಗಿಯೂ ಬ್ರಾಹ್ಮಣ ವಂಶಕ್ಕೆ ಸೇರಿದವನೆಂದು ತೋರಿಸಲು ಬ್ರಾಹ್ಮಣರು ಒಂದು ಕಥೆ ಕಟ್ಟುತ್ತಾರೆ! ಈಗಲೂ ಉತ್ತರ ಭಾರತದಲ್ಲಿ ವಾಲ್ಮೀಕಿ ಎಂಬ ಕುಲನಾಮವಿರುವ ಹರಿಜನ ವರ್ಗದವರಿದ್ದಾರೆ. ಜ್ಞಾನಿಯಾದ ವಿದುರನು ಹಿಂದಿನ ಜನ್ಮದಲ್ಲಿ ಬ್ರಾಹ್ಮಣನಾಗಿದ್ದನೆಂದು ಹೇಳುವುದು ಹಾಸ್ಯಾಸ್ಪದವೆನಿಸುತ್ತದೆ.

ತುಂಬ ವರ್ಣಸಂಕರವಾಗಿರುವುದರಿಂದ ಯಾವುದೇ ವ್ಯಕ್ತಿಯ ಜಾತಿನಿರ್ಣಯ ಮಾಡುವುದು ತುಂಬ ಕಠಿಣವೆಂದು ಮಹಾಭಾರತ ಕಾಲದಲ್ಲಿಯೇ ಯುಧಿಷ್ಠಿರನು ಹೇಳುತ್ತಾನೆ. ಈಗಿನ ಸಂದರ್ಭದಲ್ಲಂತೂ ಈ ಜಾತಿ ವಿಷಯ ಅತ್ಯಂತ ಗೊಂದಲಮಯವಾಗಿದೆ ಎಂಬುದನ್ನು ಪ್ರತ್ಯೇಕ ಹೇಳಬೇಕಾಗಿಯೇ ಇಲ್ಲ. ಈಗ ಎಲ್ಲ ವರ್ಗದವರೂ ಎಲ್ಲ ವೃತ್ತಿಯನ್ನೂ ಮಾಡಬೇಕಾದ ಸಂದರ್ಭ ಬಂದಿದೆ. ಇತಿಹಾಸದಲ್ಲಿಯೂ ಶೂದ್ರ ವಂಶಸ್ಥರು ರಾಜ್ಯಭಾರ ಮಾಡಿದ ಪ್ರಸಂಗಗಳಿವೆ. ಬ್ರಾಹ್ಮಣ ರಾಜಮನೆತನಗಳೂ ಇದ್ದವು. ಈಗ ಬ್ರಾಹ್ಮಣರು ಎಲ್ಲ ವೃತ್ತಿಗಳನ್ನೂ ಕೈಗೊಳ್ಳುತ್ತಾರೆ. ಶೂದ್ರವೃತ್ತಿಯಲ್ಲಿದ್ದೂ ಬ್ರಾಹ್ಮಣ್ಯದ ಹೆಮ್ಮೆ ಅವರನ್ನು ಬಿಡದಿರುವುದು ಸೋಜಿಗದ ವಿಷಯ. ತುಂಬ ಸುಸಂಸ್ಕೃತ, ವಿದ್ಯಾವಂತ, ಆಚಾರಶೀಲ ಶೂದ್ರರೂ ಇದ್ದಾರೆ. ಹಾಗೆಯೇ ಅತ್ಯಂತ ಕೀಳುಮಟ್ಟದ ಬ್ರಾಹ್ಮಣರೂ ಇದ್ದಾರೆ. ಆದ್ದರಿಂದ ಬ್ರಾಹ್ಮಣ ಮತ್ತು ಶೂದ್ರ ಎಂಬ ಪದಗಳನ್ನು ಮೇಲ್ವರ್ಗ ಕೆಳವರ್ಗ ಎಂಬ ಅರ್ಥದಲ್ಲಿ ಉಪಯೋಗಿಸುವಂತಿಲ್ಲ.

ಈ ವರ್ಣ ವಿಭಾಗವನ್ನು ಅನೇಕ ಕ್ಷೇತ್ರಗಳಿಗೆ ಸಂಬಂಧಿಸಿ ವಿವರಿಸಬಹುದು. ಒಟ್ಟು ದೇಶದ ಆಡಳಿತ ವ್ಯವಸ್ಥೆಯನ್ನು ತೆಗೆದುಕೊಂಡರೆ ಈ ನಾಲ್ಕು ವರ್ಣವಿಭಾಗಗಳನ್ನು ಅದಕ್ಕೆ ಅನ್ವಯಿಸಬಹುದು. ಮೊದಲನೆಯದಾಗಿ ನ್ಯಾಯವ್ಯವಸ್ಥೆಯಿರುತ್ತದೆ (Judiciary). ನ್ಯಾಯಪರಿಣತರು ಸಂವಿಧಾನವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿರಬೇಕು. ಅವರು ಯಾವುದೇ ಸರ್ಕಾರವು ಸಂವಿಧಾನಾತ್ಮಕವಾಗಿ ಆಡಳಿತ ನಡೆಸುತ್ತಿದೆಯೇ ಇಲ್ಲವೆ ಎಂಬುದನ್ನು ನೋಡಿಕೊಳ್ಳಬೇಕು. ಸರ್ಕಾರಕ್ಕೆ ಸೂಕ್ತ ಸಲಹೆ ನೀಡಬೇಕು ಮತ್ತು ಅದರ ಮೇಲೆ ನಿಯಂತ್ರಣವಿರಬೇಕು. ಇದು ಬ್ರಾಹ್ಮಣವೃತ್ತಿ. ಸರ್ಕಾರವನ್ನು ನಡೆಸುವ ಆಡಳಿತ ವರ್ಗವನ್ನು (Executive Body) ಕ್ಷತ್ರಿಯವೃತ್ತಿ ಎಂದು ಕರೆಯಬಹುದು. ಇದರ ಕೆಲಸ ವಿವಿಧ ಶಾಸನಗಳನ್ನು ಜಾರಿಗೆ ತರುವುದು, ದೇಶವನ್ನು ಆಂತರಿಕವಾಗಿಯೂ ಹೊರಗಿನಿಂದಲೂ ರಕ್ಷಿಸುವುದು, ವಿವಿಧ ಯೋಜನೆಗಳ ಮೂಲಕ ಒಟ್ಟು ಸಮಾಜದ ಪ್ರಗತಿಯನ್ನು ಸಾಧಿಸುವುದು ಇತ್ಯಾದಿ. ಇನ್ನು ವಾಣಿಜ್ಯ ವ್ಯವಸ್ಥೆಯಂತೂ (ವೈಶ್ಯವೃತ್ತಿ) ಇದ್ದೇ ಇರುತ್ತದೆ. ಈಗಿನ ಸಂದರ್ಭದಲ್ಲಿ ಇದು ಅತ್ಯಂತ ವಿಸ್ತಾರವಾಗಿ ಬೆಳೆದುಕೊಂಡು ಎಲ್ಲಕ್ಷೇತ್ರಗಳ ಮೇಲೂ ಅದು ತನ್ನ ಪ್ರಭಾವವನ್ನು ಬೀರುತ್ತಿದೆ.[೧] ಅಪವಾದವಿಲ್ಲದೆ ಎಲ್ಲ ಕ್ಷೇತ್ರಗಳಲ್ಲೂ ಪರಿಚಯಾತ್ಮಕ ಕರ್ಮಗಳನ್ನು ಮಾಡುವವರಂತೂ ಇದ್ದೇ ಇರುತ್ತಾರೆ.

ಸ್ವಾಮಿ ವಿವೇಕಾನಂದರು ಈ ನಾಲ್ಕು ವರ್ಗಗಳನ್ನು ಇತಿಹಾಸಕ್ಕೆ ಅನ್ವಯಿಸುತ್ತಾರೆ. ಬ್ರಾಹ್ಮಣಯುಗ, ಕ್ಷತ್ರಿಯಯುಗ, ವೈಶ್ಯಯುಗ ಮತ್ತು ಶೂದ್ರಯುಗ ಎಂದು ನಾಲ್ಕು ಕಾಲಘಟ್ಟಗಳನ್ನು ಅವರು ಗುರುತಿಸುತ್ತಾರೆ. ವೇದಗಳ ಆದಿಕಾಲವನ್ನು ಬ್ರಾಹ್ಮಣಯುಗವೆಂದು ಕರೆಯಬಹುದು. ಆಗ ಸಮಾಜವು ಅಷ್ಟು ಸಂಕೀರ್ಣವಾಗಿರಲಿಲ್ಲ; ಬಹುಪಾಲು ಎಲ್ಲರೂ ಧಾರ್ಮಿಕರೂ ನೀತಿವಂತರೂ ಆಗಿ ಸರಳ ಜೀವನವನ್ನು ನಡೆಸುತ್ತಿದ್ದರು. ವಿಸ್ತಾರವಾದ ಆಡಳಿತ ವ್ಯವಸ್ಥೆಯೇನೂ ಇರಲಿಲ್ಲ. ಕ್ರಮೇಣ ಕ್ಷತ್ರಿಯವರ್ಗ ಹುಟ್ಟಿಕೊಂಡಿತು. ಅನೇಕ ರಾಜರು, ರಾಜವಂಶಗಳು, ಆಡಳಿತ ವ್ಯವಸ್ಥೆ, ಸೈನಿಕವ್ಯವಸ್ಥೆ, ಅನೇಕ ಸಾಮ್ರಾಜ್ಯಗಳು, ರಾಜ್ಯವಿಸ್ತರಣೆ ಇತ್ಯಾದಿಗಳು ಬೆಳೆಯುತ್ತಾ ಹೋದವು. ಈ ಕ್ಷತ್ರಿಯ ಯುಗದಲ್ಲಿ ಸಂಗೀತ, ಚಿತ್ರಕಲೆ, ನೃತ್ಯ, ನಾಟಕ, ಸಾಹಿತ್ಯ, ಶಿಲ್ಪಕಲೆ ಇವೇ ಮುಂತಾದ ಕಲಾಪ್ರಭೇದಗಳು ಬಹು ಪ್ರಮಾಣದಲ್ಲಿ ಬೆಳೆದವು. ಈ ಯುಗ ಸಾವಿರಾರು ವರ್ಷಗಳು ಮುಂದುವರೆಯಿತು. ಈ ಯುಗದಲ್ಲಿ ಬೇರೆ ವರ್ಗದವರು ಇರಲಿಲ್ಲವೆಂದಲ್ಲ ; ಆದರೆ ಕ್ಷತ್ರಿಯರದೇ ಮೇಲುಗೈ ಆಗಿತ್ತು. ಮೊದಲು ಬ್ರಹ್ಮತೇಜ, ಅನಂತರ ಕ್ಷಾತ್ರವೀರ್ಯ, ಮತ್ತು ಮುಂದಿನ ಯುಗದಲ್ಲಿ 'ದುಡ್ಡೇ ದೊಡ್ಡಪ್ಪ'.

---

[೧] ಸಾಮಾನ್ಯ ವ್ಯಾಪಾರಿಯಿಂದ ಹಿಡಿದು ಬೃಹತ್ ಕೈಗಾರಿಕೋದ್ಯಮಿಯವರೆಗೆ ಎಲ್ಲರೂ ಈ ಕ್ಷೇತ್ರದ ಪರಿಧಿಯೊಳಗೆ ಬರುತ್ತಾರೆ.

ವೈಶ್ಯ ಯುಗವು ಯುರೋಪಿನಲ್ಲಿ ಕೈಗಾರಿಕಾ ಕ್ರಾಂತಿಯೊಂದಿಗೆ ಪ್ರಾರಂಭವಾಯಿತೆನ್ನಬಹುದು. ಐರೋಪ್ಯರು ಭಾರತಕ್ಕೆ ಬಂದದ್ದು ವ್ಯಾಪಾರಿಗಳಾಗಿಯೇ, ಇಲ್ಲಿ ಸಾಮ್ರಾಜ್ಯ ಸ್ಥಾಪಿಸಿದ್ದು ವ್ಯಾಪಾರೋದ್ದೇಶದಿಂದಲೇ. ಮೊದಲು ಕೆಲವು ಉಪಯುಕ್ತ ಸರಕುಗಳಿಗೆ ಸೀಮಿತವಾಗಿದ್ದ ವ್ಯಾಪಾರೀಕರಣವು ಈಗ ಮನುಷ್ಯ ಜೀವನದ ಎಲ್ಲ ಕ್ಷೇತ್ರವನ್ನೂ ಅದು ಆಕ್ರಮಿಸಿಕೊಂಡಿದೆ. ಈಗ ಎಲ್ಲವನ್ನೂ ಕೊಂಡುಕೊಳ್ಳಬೇಕು – ಗಾಳಿ ನೀರುಗಳನ್ನೂ ಜ್ಞಾನವನ್ನೂ ಪ್ರೀತಿಯನ್ನೂ ಸಮಾಧಿಯನ್ನು ಕೂಡ – ಕೊಂಡುಕೊಳ್ಳಬಹುದು. ಎಲ್ಲ ದೇವಸ್ಥಾನಗಳೂ ವ್ಯಾಪಾರಕೇಂದ್ರಗಳಾಗಿ ಬಿಟ್ಟಿವೆ. ಸ್ವಾಮಿ ವಿವೇಕಾನಂದರ ನೋವಿನ ನುಡಿಗಳಿವು : ''ನಾವೆಲ್ಲರೂ ವ್ಯಾಪಾರಿಗಳು. ಜೀವನದಲ್ಲಿ ವ್ಯಾಪಾರಿಗಳು, ಗುಣದಲ್ಲಿ ವ್ಯಾಪಾರಿಗಳು, ಧರ್ಮದಲ್ಲಿ ವ್ಯಾಪಾರಿಗಳು. ಅಯ್ಯೋ! ಪ್ರೀತಿಯಲ್ಲಿಯೂ ವ್ಯಾಪಾರಿಗಳು.'' ಈ ವೈಶ್ಯಯುಗದಲ್ಲಿ ಎಲ್ಲರೂ ವೈಶ್ಯರೇ.

ಇಂತಹ ವ್ಯಾಪಾರೀ ಮನೋಭಾವದಿಂದಾಗಿ ಮಾನವೀಯ ಸಂಬಂಧಗಳು ನಶಿಸಿಹೋಗುತ್ತವೆ, ಮನುಷ್ಯ ಜೀವನ ಯಾಂತ್ರಿಕವಾಗುತ್ತದೆ. ಯಂತ್ರದಂತೆ ಓಡಾಡುತ್ತಾನೆ, ಯಂತ್ರದಂತೆ ಮಾತನಾಡುತ್ತಾನೆ, ಯಂತ್ರದಂತೆ ಮುಗುಳ್ನಗುತ್ತಾನೆ. ಇಂತಹ ಯಾಂತ್ರಿಕತೆ ಇಡೀ ಜೀವನವನ್ನು ವ್ಯಾಪಿಸಿಕೊಂಡುಬಿಟ್ಟರೆ ಅದೇ ಶೂದ್ರಯುಗ. ಈ ಯುಗದಲ್ಲಿ ಎಲ್ಲರೂ ಶೂದ್ರರೇ. ಸ್ವಪ್ರೇರಣೆಯಿಲ್ಲದೆ ಇತರರು ಹೇಳಿದಂತೆ, ಹೇಳಿದಷ್ಟು ಮಾಡುವುದೇ ಶೂದ್ರವೃತ್ತಿ, ಅಥವಾ ಶೂದ್ರತ್ವದ ಲಕ್ಷಣ. ಬ್ರಾಹ್ಮಣರು ಈ ರೀತಿ ಇದ್ದರೆ ಅವರನ್ನೂ ಶೂದ್ರರೆಂದೇ ಕರೆಯಬೇಕು.

ಈ ನಾಲ್ಕು ವೃತ್ತಿಗಳನ್ನು ಸ್ವಾಮಿ ವಿವೇಕಾನಂದರು ಪ್ರತಿಯೊಬ್ಬ ವ್ಯಕ್ತಿಗೂ ಅನ್ವಯಿಸಬಹುದು ಎನ್ನುತ್ತಾರೆ. ವ್ಯಕ್ತಿಯು ಅಧ್ಯಯನ ನಡೆಸುತ್ತಿರುವಾಗ, ಆಧ್ಯಾತ್ಮಿಕ ಸಾಧನೆ ಮಾಡುತ್ತಿರುವಾಗ, ಧರ್ಮಪ್ರಚಾರದಲ್ಲಿ ತೊಡಗಿರುವಾಗ, ಕಿರಿಯರಿಗೆ ಮಾರ್ಗದರ್ಶನ ನೀಡುತ್ತಿರುವಾಗ ಅವನು ಬ್ರಾಹ್ಮಣ. ಅಷ್ಟೇ ಅಲ್ಲದೆ ಅವನು ಸಚ್ಚಾರಿತ್ರ್ಯಸಂಪನ್ನನೂ ಆಗಿರಬೇಕು ಮತ್ತು ಅತ್ಯಂತ ಸಭ್ಯ ವ್ಯಕ್ತಿಯೂ ಆಗಿರಬೇಕು. ಯುಧಿಷ್ಠಿರನು ಬ್ರಾಹ್ಮಣ್ಯದ ಲಕ್ಷಣಗಳನ್ನು ಹೇಳುತ್ತಾನೆ:

**ಸತ್ಯಂ ದಾನಂ ಕ್ಷಮಾ ಶೀಲಂ ಆನೃಶಂಸ್ಯಂ ತಪೋಽಘೃಣಾ ।**
**ದೃಶ್ಯಂತೇ ಯತ್ರ ನಾಗೇಂದ್ರ ಸ ಬ್ರಾಹ್ಮಣ ಇತಿ ಸ್ಮೃತಃ ॥**

''ಸತ್ಯ, ದಾನ, ಕ್ಷಮಾಗುಣ, ಚಾರಿತ್ರ್ಯ, ದಯೆ, ತಪಸ್ಸು ಮತ್ತು ತಿರಸ್ಕಾರಭಾವ ಇಲ್ಲದೇ ಇರುವುದು – ಈ ಗುಣಗಳು ಯಾರಲ್ಲಿ ಇರುತ್ತವೆಯೋ ಅವನೇ ಬ್ರಾಹ್ಮಣ.''

ಅದೇ ವ್ಯಕ್ತಿಯು ಸ್ವರಕ್ಷಣೆಯಲ್ಲಿ ತೊಡಗಿರುವಾಗ ಕ್ಷತ್ರಿಯ. ಸಮಾಜದಲ್ಲಿ ಬಾಳುವಾಗ ಅನೇಕರು ನಮ್ಮ ಒಳ್ಳೆಯತನದ ಪ್ರಯೋಜನವನ್ನು ಪಡೆದು ನಮಗೆ ಹಾನಿಯನ್ನು ಉಂಟುಮಾಡಬಹುದು. ಆದ್ದರಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳುವುದು ಆವಶ್ಯಕ. ಶ್ರೀರಾಮಕೃಷ್ಣರು ಹೇಳುವಂತೆ ಕಚ್ಚದಿದ್ದರೂ ಬುಸುಗುಟ್ಟಬೇಕು. ಒಂದುವೇಳೆ ಕಚ್ಚಲೇಬೇಕಾದರೂ ವಿಷ ಕಾರಬಾರದು. ಆದರೆ ಕೆಲವರು ಕಚ್ಚಲಾರದೆ ವಿಷ ಕಾರುತ್ತಿರುತ್ತಾರೆ , ಇದು ತಪ್ಪು. ಈ ಸ್ವರಕ್ಷಣೆಯು ಸಂದರ್ಭೋಚಿತವಾಗಿರುತ್ತದೆ; ಎಲ್ಲ ಸನ್ನಿವೇಶಗಳಲ್ಲಿಯೂ ಎಲ್ಲ ವ್ಯಕ್ತಿಗಳ ವಿಷಯದಲ್ಲಿಯೂ ನಮ್ಮ ಪ್ರತಿಕ್ರಿಯೆ ಒಂದೇ ರೀತಿ ಇರಬೇಕಾಗಿಲ್ಲ , ಮತ್ತು ಇರಲೂಬಾರದು. ಪರಾಕ್ರಮಣಕ್ಕಾಗಿ ಅಲ್ಲದೆ, ಸ್ವರಕ್ಷಣೆಗಾಗಿ ಪರಾಕ್ರಮ ಮೆರೆಯುವುದು ಕ್ಷತ್ರಿಯ ವೃತ್ತಿ ಮತ್ತು ಇದು ಪ್ರತಿಯೊಬ್ಬ ವ್ಯಕ್ತಿಗೂ ಅನ್ವಯಿಸುತ್ತದೆ.

ಅದೇ ವ್ಯಕ್ತಿಯೂ ತನ್ನ ಜೀವನೋಪಾಯಕ್ಕಾಗಿ ಹಣಸಂಪಾದನೆ ಮಾಡುವಾಗ ಅವನು ವೈಶ್ಯ. ಅವನು ಯಾವುದೋ ವೃತ್ತಿಯಲ್ಲಿ ತೊಡಗಿರಬಹುದು. ಅವನು ತನ್ನ ಜ್ಞಾನವನ್ನು ಮಾರಬಹುದು, ಅವನು ಸಂಗೀತಗಾರನಾಗಿದ್ದರೆ ಹಣಕ್ಕಾಗಿ ಹಾಡಬಹುದು, ಅಥವಾ ಪೌರೋಹಿತ್ಯದ ಮೂಲಕ ಹಣ ಸಂಪಾದಿಸಬಹುದು. ಯಾವುದೇ ರೀತಿಯಲ್ಲಿ ಅವನು ಹಣ ಸಂಪಾದಿಸಿದರೂ (ಕಳ್ಳತನ, ಭ್ರಷ್ಟಾಚಾರಾದಿಗಳಲ್ಲದೆ) ಅವನು ವೈಶ್ಯನಾಗುತ್ತಾನೆ.

ಮತ್ತೆ ಅದೇ ವ್ಯಕ್ತಿಯು ಸೇವಾಕಾರ್ಯದಲ್ಲಿ ನಿರತನಾಗಿದ್ದಾಗ ಶೂದ್ರನಾಗುತ್ತಾನೆ. ಪತಿಪತ್ನಿಯ ಪರಸ್ಪರ ಸೇವೆ, ಗುರುಹಿರಿಯರ ಸೇವೆ, ರೋಗಿಗಳ ಶುಶ್ರೂಷೆ, ಸೇವಕರು ಮಾಡುವ ಕೆಲಸಗಳನ್ನು ತಾನೇ ಮಾಡುವುದು – ಇತ್ಯಾದಿ ಕೆಲಸಗಳು ಶೂದ್ರ ಕರ್ಮಗಳು. ಎಲ್ಲರಲ್ಲೂ ಈ ನಾಲ್ಕು ಸ್ವಭಾವಗಳು ಇದ್ದೇ ಇರುತ್ತವೆ. ಕೆಲವರಲ್ಲಿ ಬ್ರಾಹ್ಮಣ ಪ್ರವೃತ್ತಿಯೂ, ಕೆಲವರಲ್ಲಿ ಕ್ಷತ್ರಿಯ ಪ್ರವೃತ್ತಿಯೂ, ಮತ್ತೆ ಕೆಲವರಲ್ಲಿ ವೈಶ್ಯ ಸ್ವಭಾವವೂ ಇನ್ನು ಕೆಲವರಲ್ಲಿ ಸೇವಾ ಮನೋಭಾವವೂ ಅಧಿಕವಾಗಿರಬಹುದು. ಇದು ಎಲ್ಲರ ಗಮನಕ್ಕೂ ಬರುವಂತಹ ವಿಷಯವೇ. ಇದರ ಆಧಾರದ ಮೇಲೆ ನಾಲ್ಕು ವರ್ಣಗಳ ವ್ಯವಸ್ಥೆ ರೂಢಿಗೆ ಬಂದಿರಬಹುದು. ಆದರೆ ಇಂತಹ ವ್ಯವಸ್ಥೆಯಲ್ಲಿ ಯಾವುದೇ ರೀತಿಯ ಮೇಲು–ಕೀಳು ಭಾವನೆಗೂ ಹಕ್ಕುಬಾಧ್ಯತೆಗಳಿಗೂ ಅವಕಾಶವಿರಕೂಡದು.

ಈ ನಾಲ್ಕೂ ವೃತ್ತಿಗಳನ್ನು ದೈಹಿಕ ಕಾರ್ಯಗಳಿಗೂ ಅನ್ವಯಿಸಬಹುದು. ಮಿದುಳಿನ ಕೆಲಸವನ್ನು ಬ್ರಾಹ್ಮಣವೃತ್ತಿಯೆಂದು ಕರೆಯಬಹುದು. ಅಲ್ಲಿಯೇ ಎಲ್ಲ ಚಿಂತನೆಗಳು ಒಳಿತು, ಕೆಡುಕು ನಡೆಯುತ್ತವೆ, ಮತ್ತು ಅದಕ್ಕನುಗುಣವಾಗಿ ಬೇರೆಲ್ಲ ಅಂಗಾಂಗಗಳೂ ಕೆಲಸವೆಸಗುತ್ತವೆ. ಮಿದುಳೇ ಎಲ್ಲ ಜ್ಞಾನಗಳ ಕೇಂದ್ರ. ನಮ್ಮ ದೇಹದಲ್ಲಿ ರಕ್ಷಣಾವ್ಯವಸ್ಥೆಯೂ ಇದೆ. ಅಸಂಖ್ಯ ರೋಗಾಣುಗಳ ವಿರುದ್ಧ ದೇಹದಲ್ಲಿ ನಿರಂತರ ಯುದ್ಧ ನಡೆಯುತ್ತಿರುತ್ತದೆ. ಈ ರಕ್ಷಣಾ ವ್ಯವಸ್ಥೆ ದುರ್ಬಲವಾದರೆ ದೇಹವು ಯಾವುದೇ ರೋಗಕ್ಕಾದರೂ ಬಲಿಯಾಗಬಹುದೆಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಈ ವ್ಯವಸ್ಥೆಯನ್ನು ಕ್ಷತ್ರಿಯವೃತ್ತಿಯೆಂದು ಕರೆಯಬಹುದು. ಜೀವಕೋಶಗಳ ಉತ್ಪತ್ತಿ, ರಕ್ತ ಮುಂತಾದವುಗಳ ಚಲನೆ ಇವುಗಳನ್ನು ವೈಶ್ಯವೃತ್ತಿ ಎಂದು ಕರೆಯಬಹುದು. ದೇಹದಲ್ಲಿ ನಿರಂತರ ನಡೆಯುತ್ತಿರುವ ಶುದ್ಧೀಕರಣ ಕ್ರಿಯೆಯನ್ನು, ಶೂದ್ರವೃತ್ತಿ ಎಂದು ಕರೆಯಬಹುದು.

ಈ ನಾಲ್ಕು ವೃತ್ತಿಗಳನ್ನು ವ್ಯಕ್ತಿಯ ಆಧ್ಯಾತ್ಮಿಕ ಜೀವನಕ್ಕೂ ಅನ್ವಯಿಸಬಹುದು. ಅರ್ಚನೆ, ಧ್ಯಾನ, ಜಪ, ಪ್ರಾರ್ಥನೆ, ಇತ್ಯಾದಿ ಆಧ್ಯಾತ್ಮಿಕ ಸಾಧನೆಗಳನ್ನು ಬ್ರಾಹ್ಮಣವೃತ್ತಿ ಎನ್ನಬಹುದು. ಶಮ,